**ಕರ್ನಾಟಕ ಸರ್ಕಾರ**

**ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ**


| | |
|---|---|
| **ಜಂಟಿ ನಿರ್ದೇಶಕರ ಕಚೇರಿ,**<br>**ಜಿಲ್ಲಾ ಕೈಗಾರಿಕಾ ಕೇಂದ್ರ,**<br>**ಒಕ್ಕಲಿಗರ ಕಲ್ಯಾಣ ಮಂಟಪದ ಹತ್ತಿರ,**<br>**ಬಿ.ಬಿ.ರಸ್ತೆ, ಚಿಕ್ಕಬಳ್ಳಾಪುರ-562101.**<br>**ದೂರವಾಣಿ ಸಂಖ್ಯೆ:08156-273303, 295816**<br>**ಇ-ಮೇಲ್:jd-cbalapur@karnatakaindustry.gov.in** | **Office of the Joint Director,**<br>**District Industries Centre,**<br>**Near Vokkaligara Choultry,**<br>**B.B.Road,**<br>**Chikkaballapura-562101,**<br>**Ph No: 08156-273303, 295816**<br>**E-mail: jd-cbalapur@karnatakaindustry.gov.in** |


ಸಂಖ್ಯೆ:ಚಿಕ್ಕೈಕೇ/ಚಿಬಪು/ಕೈ.ಪ್ರ-ಬೇಡಿಕೆ/2023-24 ದಿನಾಂಕ:20-10-2023

ರವರಿಗೆ,

ವಿಶೇಷ ಭೂ ಸ್ವಾಧೀನಾಧಿಕಾರಿಗಳು-2

ಕೆ.ಐ.ಎ.ಡಿ.ಬಿ, ನಂ:39, ಶಾಂತಿಗೃಹ

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕಟ್ಟಡ,

4 ನೇ ಮಹಡಿ, ಅರಮನೆ ರಸ್ತೆ, ಬೆಂಗಳೂರು

ಮಾನ್ಯರೆ,

ವಿಷಯ: ಚಿಕ್ಕಬಳ್ಳಾಪುರ ತಾಲ್ಲೂಕು, ನಂದಿ ಹೋಬಳಿ ವ್ಯಾಪ್ತಿಯಲ್ಲಿ ಕೈಗಾರಿಕಾ ಪ್ರದೇಶ ಅಭಿವೃದ್ಧಿಗಾಗಿ ಸ್ವಾದೀನ ಪಡಿಸಿಕೊಳ್ಳುವ ಬಗ್ಗೆ.

******

ವಿಷಯಕ್ಕೆ ಸಂಬಂಧಿಸಿದಂತೆ, ಜಿಲ್ಲೆಯು ರಾಜ್ಯದ ರಾಜಧಾನಿಗೆ ಸಮೀಪವಾಗಿದ್ದು, ಬೆಂಗಳೂರು ವಿಮಾನ ನಿಲ್ದಾಣ, ಐಸಿಡಿ ಬೆಂಗಳೂರು, ಐಸಿಡಿ ಹೈದರಾಬಾದ್ ಹಾಗೂ ನೆರೆಯ ರಾಜ್ಯಗಳಿಗೆ ಉತ್ತಮ ರಸ್ತೆ ಹಾಗೂ ರೈಲು ಸಂಪರ್ಕವನ್ನು ಹೊಂದಿದ್ದು ಬಂಡವಾಳ ಹೂಡಿಕೆಗೆ ಸಮರ್ಪಕ ಹಾಗೂ ಪೂರಕ ವಾತಾವರಣವಿದ್ದು, ಸಂಭಾವ್ಯ ತಾಣವಾಗಿದೆ. ಬಹುತೇಕ ಉದ್ದಿಮೆದಾರರು ಜಿಲ್ಲೆಯಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಆಸಕ್ತರಾಗಿದ್ದು, ವಿಪುಲ ಬೇಡಿಕೆ ಇರುವುದನ್ನು ಗಮನಿಸಲಾಗಿದೆ. ಪ್ರಸ್ತುತ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿರುವ ಕೈಗಾರಿಕಾ ಪ್ರದೇಶಗಳಲ್ಲಿ ಹೊಸ ಉದ್ದಿಮೆಗಳಿಗಾಗಿ ಹಂಚಿಕೆ ಮಾಡಲು ಯಾವುದೇ ಜಮೀನು ಲಭ್ಯವಿರುವುದಿಲ್ಲ.

ಆದ್ದರಿಂದ ಚಿಕ್ಕಬಳ್ಳಾಪುರ ತಾಲ್ಲೂಕು ನಂದಿ ಹೋಬಳಿಯ ದೊಡ್ಡಮರಳಿ, ಚಿಕ್ಕಮರಳಿ, ಗವಿಗಾನಹಳ್ಳಿ, ವರಮಲ್ಲೇನಹಳ್ಳಿ, ಕೊಳವನಹಳ್ಳಿ, ತಾಲಹಳ್ಳಿ, ಬೊಮ್ಮನಹಳ್ಳಿ, ಕಡಶೀಗೇನಹಳ್ಳಿ ಮುಂತಾದ ಗ್ರಾಮಗಳ ವ್ಯಾಪ್ತಿಯಲ್ಲಿನ ಸುಮಾರು 6000-00 ಎಕರೆ ವಿಸ್ತೀರ್ಣದ ಜಮೀನನ್ನು ಸ್ವಾಧೀನ ಪಡಿಸಿಕೊಂಡು ಕೈಗಾರಿಕಾ ಪ್ರದೇಶ ಅಭಿವೃದ್ಧಿ ಪಡಿಸುವುದು ಸೂಕ್ತವಾಗಿರುತ್ತದೆ. ಈ ವಿಷಯವನ್ನು ತಮ್ಮ ಅವಗಾಹನೆಗಾಗಿ ಕಳುಹಿಸುತ್ತಾ, ತ್ವರಿತವಾಗಿ ಕೈಗಾರಿಕಾ ಪ್ರದೇಶ ಅಭಿವೃದ್ಧಿಪಡಿಸಲು ಕ್ರಮವಹಿಸುವಂತೆ ಕೋರಿದೆ.

ತಮ್ಮ ವಿಶ್ವಾಸಿ,

ಜಂಟಿ ನಿರ್ದೇಶಕರು
ಜಿಲ್ಲಾ ಕೈಗಾರಿಕಾ ಕೇಂದ್ರ
ಚಿಕ್ಕಬಳ್ಳಾಪುರ.

Scanned with OKEN Scanner